


ಎಡದಿಂದ ಬಲಕ್ಕೆ:

1. ಅಕ್ಕ ಪಕ್ಕ ಹೆಚ್ಚು ಕಡಿಮೆ ಇಲ್ಲದೆ ಎಲ್ಲವೂ ತೃಪ್ತಿಕರವಾಗಿದೆ 4
3. ವ್ಯವಹಾರದಲ್ಲಾದ ವ್ಯತ್ಯಯದಿಂದ ಈ ಅಗಲಿಕೆ 3
4. ಆ ಕಟ್ಟಡದಲ್ಲಿ ಒಂದು ಕೋಣೆ ಹಿಂದು ಮುಂದಾಗಿದೆಯಲ್ಲ! 3
6. ಪರಿತ್ಯಕ್ತರ ಜೊತೆಗೆ ನಡೆದದ್ದು ನೆತ್ತರು ಸುರಿದ ಯುದ್ಧ 4
7. ಹಿಂದೆ ದಟ್ಟ ಅರಣ್ಯವಿದ್ದ ಪ್ರದೇಶ ಇದು 4
8. ಆ ಕಡೆಯೂ ನೇರವಿಲ್ಲ ; ಈ ಕಡೆಯಿಂದಲೂ ನೇರವಿಲ್ಲ 4
10. ಕರೆದು ತೋರಿಸುವುದೇ ಸರಿ, ಅಗೋ, ಅಮೃತ ಮೂಲ ಚಂದ್ರ 4
12. ವೃಕ್ಷವೇ ಇರುವಂತೆ ಇದಾವ ಊರು? 4
14. ಎಲ್ಲವನ್ನೂ ಸಮಗೊಳಿಸಿದ ನಂತರವೇ ಆತನಿಗೆ ನೆಮ್ಮದಿ 4
16. ಕಪ್ಪೆಯ ಜೊತೆಗೇ ಕುಳಿತಿರುವ ಪಾರಿವಾಳ ನೋಡಿ 3
17. ಬಡ ಬಗ್ಗರಿಗೆ ಸದಾ ಒಂದಿಲ್ಲೊಂದು ಹೆದರಿಕೆ, ಆತಂಕ 3
18. ತವರಿನ ನೆನಪುಗಳು, ಬಗೆ ಬಗೆ 4

ಮೇಲಿಂದ ಕೆಳಕ್ಕೆ:

1. ಅಪಹರಿಸಲು ಸಾಧ್ಯವೇ? ಅದೊಂದು ಮರುಭೂಮಿ 3
2. ಕಡೆಯ ತನಕವೂ ಬಿಡಲೇ ಇಲ್ಲ, ನವೆ 3
3. ವಿತರಿಸುವವರ ಸರಣಿ ಇನ್ನೂ ವೃದ್ಧಿಗೊಂಡಿದೆ 4
5. ಕಾಳು ಕಡ್ಡಿ ಎಲ್ಲವೂ ಏಕಿಷ್ಟು ಕೊಳೆ ಕೊಳೆ? 3
7. ಅತ್ತಲೂ ಪಶು, ಇತ್ತಲೂ ಪಶು. ಹಾಗೆಯೇ ಇಲ್ಲಿ ಅಕ್ಕಪಕ್ಕ 4
9. ಏನೂ ಕೆಟ್ಟಿಲ್ಲ ಎಂಬಂತೆ ತೋರಿಸಿದ ಮೋಸಗಾರಿಕೆ 4
11. ಕಳ್ಳರ ಕೈ ತಾಗಿರುವುದೇ ಒಂದು ಭಾರೀ ದೋಷ 3
13. ವರ್ತಕರಿಗೆ ಲಾಭ ತಂದೀತೇ ಈ ಕಾಯಿಪಲ್ಲೆ? 4
14. ಸೋತು ಸೋತು ಸುಸ್ತಾಗಿದ್ದೇ ನಿರಂತರ 3
15. ನಗರಕ್ಕೆ ತಕ್ಕ ಶಬ್ದ ಹೊಮ್ಮಿಸುವ ಭಾರೀ ಚರ್ಮ ವಾದ್ಯ 3

---

## 31-10-2019 ಉತ್ತರಗಳು

ಎಡದಿಂದ ಬಲಕ್ಕೆ:

1. ಉದಾಸೀನ 3. ಪ್ರಮಾದ 4. ವ್ಯಸನ 6. ಮಾಸಾಶನ 8. ಜತೆಗಾರ (=ಜೊತೆಗಾರ) 10. ಹರಿದಾರಿ 12. ವನಸ್ಪತಿ16. ಕಲ್ಮಶ 17. ತಂಬಾಕು 18. ಕನ್ನಡಕ

ಮೇಲಿಂದ ಕೆಳಕ್ಕೆ:

1. ಉದಯ 2. ನವ್ಯತೆ 3. ಪ್ರಕಾಶ 5. ನಮ್ರತೆ 6. ಮಾತಾಮಹ 7. ನವಪರಿ 8. ಜಲಾಭಾವ 9. ರಮಾಪತಿ 11. ದಾಕ್ಷಿಣ್ಯ 13. ನಸುಕು 14. ದಂಶಕ 15. ಆತಂಕ

ಪ್ರಶ್ನಾ ಒಕಣ

# ಹ್ಯಾಮರ್ ಹೆಡ್: ಏನು ವಿಶೇಷ?

ಹ್ಯಾಮರ್ ಹೆಡ್. ಅದು ಅತ್ಯಂತ ವಿಚಿತ್ರ ರೂಪದ ಮೀನು. ವಾಸ್ತವವಾಗಿ ಅದು ಶಾರ್ಕ್‌ಗಳ (ಚಿತ್ರ 3) ಗುಂಪಿಗೆ ಸೇರಿದ ಮೀನು. ಕತ್ತಿನ ಎಡಕ್ಕೂ ಬಲಕ್ಕೂ ಚಾಚಿ ನಿಂತು 'ಸುತ್ತಿಗೆಯ ಆಕಾರದ ತಲೆ'ಯನ್ನು ಹೊಂದಿರುವ ಕಾರಣಕ್ಕೆ ಈ ಮೀನಿಗೆ (ಚಿತ್ರ1, 2) 'ಹ್ಯಾಮರ್ ಹೆಡ್' ಎಂಬ ರೂಪಾನ್ವಯ ಹೆಸರು. 'ಸೆಫಲೋಫಾಯಿಲ್' ಎಂದೇ ಗುರುತಿಸಲಾಗುವ ಈ ಅನನ್ಯ ಆಕಾರದ ತಲೆಯ ತಳದಲ್ಲಿ ಭಯಂಕರ ಹಲ್ಲುಗಳಿಂದ ಕೂಡಿದ ಬಾಯಿ; ಶಿರದ ಎಡ ಬಲಗಳ ಎರಡೂ ತುದಿಗಳಲ್ಲಿ ಒಂದೊಂದು ಕಣ್ಣು... ಒಟ್ಟಾರೆ ಇಂತಹ ಭಾರೀ ವಿಲಕ್ಷಣ ರೂಪವೇ ಹ್ಯಾಮರ್ ಹೆಡ್ ಶಾರ್ಕ್‌ನ ಪ್ರಥಮ ಪರಮ ವಿಶೇಷ.

ಹ್ಯಾಮರ್ ಹೆಡ್ ಶಾರ್ಕ್‌ಗಳಲ್ಲಿ ಒಂಬತ್ತು ಪ್ರಭೇದಗಳಿವೆ. ಅವುಗಳ ಶರೀರದ ಉದ್ದ ಮೂರರಿಂದ ಮೂವತ್ತು ಅಡಿವರೆಗೆ ಭಿನ್ನ ಭಿನ್ನ; ತೂಕವೂ 3 ಕಿಲೋದಿಂದ 580 ಕಿಲೋಗ್ರಾಂವರೆಗೆ ವಿಭಿನ್ನ. ಬೆಚ್ಚನೆಯ ನೀರಿನ ಕಡಲಿನಾವಾರಗಳಲ್ಲಿ, ತೀರಗಳ ಸನಿಹದಲ್ಲಿ ಅವುಗಳ ಪ್ರಧಾನ ನೆಲೆ. ಹಗಲಿನಲ್ಲಿ 100ರವರೆಗಿನ ಸಂಖ್ಯೆಗಳಲ್ಲಿ ಗುಂಪು ಗುಂಪಾಗಿ ಈಜಾಡುವ ಮತ್ತು ವಿಶ್ರಮಿಸುವ ಈ ಶಾರ್ಕ್‌ಗಳು ಇರುಳಾದೊಡನೆ ಒಟೊಂಟಿಯಾಗಿ ಬೇಟೆಗೆ ಹೊರಡುತ್ತವೆ. ಆಕ್ಟೋಪಸ್, ಸ್ಕ್ವಿಡ್, ಸ್ಟಿಂಗ್ ರೇ ಮತ್ತು ಇತರ ಪುಟ್ಟ ಗಾತ್ರದ ಶಾರ್ಕ್‌ಗಳು ಹ್ಯಾಮರ್ ಹೆಡ್‌ಗಳ ಮುಖ್ಯ ಆಹಾರ. ಈ ಮತ್ಸ್ಯಗಳ ಸರಾಸರಿ ಆಯುಷ್ಯ 30 ವರ್ಷ.

ವಿಸ್ಮಯ ಏನೆಂದರೆ, ಪ್ರಾಣಿಲೋಕದಲ್ಲೇ ಪರಮ ವಿಚಿತ್ರ ಆಕಾರದ್ದಾಗಿರುವ ಹ್ಯಾಮರ್ ಹೆಡ್‌ನ ತಲೆ ಅದಕ್ಕೆ ತ್ರಿವಿಧ ಅದ್ಭುತ ಅನುಕೂಲಗಳನ್ನು ಒದಗಿಸಲೆಂದೇ ವಿನ್ಯಾಸಗೊಂಡಿದೆ! ಮೊದಲಿಗೆ ಸುತ್ತಿಗೆಯಾಕಾರದ ಶಿರದಿಂದಾಗಿ ಈ ಮೀನು ಈಜುವಾಗ ಅತ್ಯಂತ ವೇಗವಾಗಿ, ಕ್ಷಿಪ್ರವಾಗಿ ಎಡಕ್ಕೂ ಬಲಕ್ಕೂ ತಿರುಗಬಲ್ಲ, ಹಾಗಾಗಿ ವೇಗಗಾಮೀ ಬಲಿ ಪ್ರಾಣಿಗಳನ್ನೂ ಸುಲಭವಾಗಿ ಬೇಟೆಯಾಡಬಲ್ಲ ಸಾಮರ್ಥ್ಯವನ್ನು ಪಡೆದಿದೆ. ಎರಡನೆಯದಾಗಿ, ಕಣ್ಣುಗಳು ದೂರ ದೂರ ತಲೆಯ ಎರಡೂ ತುದಿಗಳಲ್ಲಿ ಇರುವುದರಿಂದ ಸುಮ್ಮನಿದ್ದಾಗ ಎಡ ಬಲದ ಎಲ್ಲ ದೃಶ್ಯಗಳನ್ನೂ, ಲಂಬವಾಗಿ ತಲೆಯನ್ನು ತಿರುಗಿಸಿದಾಗ ಮೇಲಿನ ಕೆಳಗಿನ ಎಲ್ಲ ದೃಶ್ಯಗಳನ್ನೂ (ಎಂದರೆ ಶತ್ರುಗಳನ್ನೂ, ಬಲಿ ಪ್ರಾಣಿಗಳನ್ನೂ) ಈ ಮೀನು ಏಕಕಾಲದಲ್ಲಿ ಕಾಣಬಹುದಾಗಿದೆ.




ಮೂರನೆಯದಾಗಿ, ಸುತ್ತಿಗೆ ಆಕಾರದ ತಲೆಯ ಅತಿ ಹೆಚ್ಚು ಮೇಲ್ಮೈ ವಿಸ್ತೀರ್ಣದಿಂದ ಈ ಮೀನಿನ ತಲೆ ಭಾಗದಲ್ಲಿ ವಿದ್ಯುತ್ ಗ್ರಾಹಕ ಕೋಶಗಳು (ಎಲೆಕ್ಟ್ರಿಕಲ್ ರಿಸೆಪ್ಟರ್ಸ್) ಬೇರೆಲ್ಲ ಶಾರ್ಕ್ ಪ್ರಭೇದಗಳಿಗಿಂತಲೂ ಬಹಳ ಹೆಚ್ಚು ಸಂಖ್ಯೆಯಲ್ಲಿವೆ. ಹಾಗಾಗಿ ಶತ್ರುಗಳು ಮತ್ತು ಬಲಿಪ್ರಾಣಿಗಳ ಶರೀರದಿಂದ ಹೊಮ್ಮುವ ಅತ್ಯಂತ ಕ್ಷೀಣ ವಿದ್ಯುದಂಶಗಳನ್ನೂ ಈ ಮತ್ಸ್ಯಗಳು ಸ್ಪಷ್ಟವಾಗಿ, ಬಹು ದೂರದಿಂದಲೇ ಗ್ರಹಿಸುತ್ತವೆ. ತನ್ಮೂಲಕ ಬೇಟೆಯಾಡುವ ಅಥವಾ ಸ್ವ–ರಕ್ಷಣೆಯ ಕಾರ್ಯ ಅವಕ್ಕೆ ಸುಲಭ ಸಾಧ್ಯವಾಗಿದೆ.

■ ಎನ್. ವಾಸುದೇವ್